ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ 1999ರ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : * ವಿಧೇಯಕವನ್ನು ಮಂಡಿಸಲಾಗಿದೆ.*

ಶ್ರೀ ಜೆ. ಸಿ. ಮಾಧುಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ಧರಣಿಯನ್ನು ಕೈಬಿಟ್ಟು ಮರಳಿ ಅವರ ಸ್ಥಾನಕ್ಕೆ ಬರಬೇಕೆಂದು ತಾವು ಹೇಳಬೇಕು.

ಉಪಾಧ್ಯಕ್ಷರು : ನಾನು ಈಗಾಗಲೇ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸಣ್ಣ ಪ್ರಶ್ನೆಗೆ ಉತ್ತರ ಕಳುಹಿಸುವುದಕ್ಕೆ ಮಾನ್ಯ ಸಚಿವರು ಇಷ್ಟೊಂದು ತೊಂದರೆ ಮಾಡಿದರೆ ಹೇಗೆ? ನಮ್ಮ ಗೆಳೆಯನನ್ನು ಬಾವಿಗೆ ಬೀಳಿಸಿ ನಾವು ಇಲ್ಲಿ ನೋಡಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ?

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಜಯಚಂದ್ರರವರು ಮತ್ತು ಮಾನ್ಯ ರಾಮಸ್ವಾಮಿಯವರು ಹಿರಿಯರಿದ್ದಾರೆ ಮಾನ್ಯ ಉಪಾಧ್ಯಕ್ಷರ ಮೂಲಕ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಸಚಿವರು ನಾಳೆದಿವಸ ಖಂಡಿತವಾಗಿ ಸಾಧ್ಯವಾದಷ್ಟು ಉತ್ತರವನ್ನು ತರಿಸಿಕೊಡುತ್ತಾರೆ ಒಂದು ವೇಳೆ ಅದನ್ನು ತರಿಸಿಕೊಡುತ್ತೇನೆಂದು ಹೇಳುವುದೇ ಪ್ರಿವಿಲೇಜ್ ಆಗಬಾರದಲ್ಲವೆ? ಈಗಾಗಲೇ 7 ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ತರಿಸಿಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ದಯಮಾಡಿ ತಾವು ತಮ್ಮ ಸ್ಥಾನಗಳಿಗೆ ಮರಳಿ ಬರಬೇಕು. ನಾನು ನಿಮಗೆ ಖಂಡಿತ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಪ್ರಶ್ನೋತ್ತರ ವೇಳೆಯಲ್ಲಿ ಸಾಮಾನ್ಯವಾಗಿ ಧರಣಿ ಮಾಡುವುದಿಲ್ಲ ಇದು ಮಾನ್ಯ ರಾಮಸ್ವಾಮಿಯವರಿಗೂ ಗೊತ್ತು ಆದ್ದರಿಂದ ಮಾನ್ಯ ರಾಮಸ್ವಾಮಿಯವರು ದಯಮಾಡಿ ವಾಪಸ್ಸು ಬರಬೇಕು. ಇಲ್ಲದಿದ್ದರೆ ಬೇರೆ ಸಂಪ್ರದಾಯ ಪ್ರಾರಂಭವಾಗುತ್ತದೆ.

ಶ್ರೀ ಹೆಚ್. ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಬಾಕಿ ಉಳಿದಿರುವ ಎಲ್ಲಾ ಮಾಹಿತಿಗಳಿಗೂ ಉತ್ತರವನ್ನು ಒದಗಿಸಿಕೊಡುತ್ತೇನೆ. ಇದನ್ನು ಮುಚ್ಚಿಕೊಳ್ಳಬೇಕು ಅಥವಾ ಕೊಡಬಾರದೆಂಬ ಉದ್ದೇಶ ನನಗಿಲ್ಲ. ನಮ್ಮ ಬ್ರದರ್ ಇನ್-ಲಾ ತೀರಿಕೊಂಡಿದ್ದರಿಂದ ಸುಮಾರು 15 ದಿವಸಗಳ ಕಾಲ ಸದನಕ್ಕೆ ಬರದೇ ಇರುವುದರಿಂದ ನನಗೆ ಕಾನ್‌ಟ್ಯಾಕ್ಟ್ ಇರಲಿಲ್ಲ ನೀವು ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾವ ಮಾಡಿದರೆ ನನ್ನ ಹತ್ತಿರ ಎಷ್ಟು ಮಾಹಿತಿ ಲಭ್ಯವಿದೆಯೋ ಅದನ್ನೆಲ್ಲಾ ಒದಗಿಸಿಕೊಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ನಾಳೆ ವಿಧಾನಸಭೆ ಕೊನೆಯಾಗಿರುವುದರಿಂದ ಪ್ರಶ್ನೋತರ ವೇಳೆ ಇರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಕೊನೆ ಪಕ್ಷ ಶೂನ್ಯ ವೇಳೆಯಲ್ಲಾದರೂ ಉತ್ತರ ಕೊಡಿ. ನಾವು ತಮ್ಮಿಂದ ಈ ರೀತಿಯಾದ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಏಕೆಂದರೆ ಇದು ತಡೆಹಿಡಿದಿರುವ ಪ್ರಶ್ನೆಯಾಗಿರುವುದರಿಂದ ಉತ್ತರವನ್ನು ಸಾಧ್ಯವಾದಷ್ಟು ತರಿಸಿಕೊಡುತ್ತೇವೆ ಎಂಬ ಮಾತು ನಿಮ್ಮ ಬಾಯಿಂದ ಬರಬಾರದು.

---

* ಸಹಬಂಧ III

ಡಾ. ಹೆಚ್. ಸಿ. ಮಹದೇವಪ್ಪ : ಸಂಪೂರ್ಣವಾದ ಮಾಹಿತಿಯನ್ನು ಕೊಡಿ ಎಂದು ಈಗಾಗಲೇ ಹೇಳಿದಾಗ್ಯೂ ನಾನು ಎರಡು ಮೂರು ಸಾರಿ ಸಮಯವನ್ನು ತೆಗೆದು ಕೊಂಡಿದ್ದೇನೆ. ನಮ್ಮ ಹತ್ತಿರ ಸಂಪೂರ್ಣವಾದಂತಹ ಮಾಹಿತಿ ಇರಲಿಲ್ಲವಾದ ಕಾರಣ ಸ್ವಲ್ಪ ತಡವಾಯಿತು. ಅಸೆಂಬ್ಲಿ ಮುಗಿದ ನಂತರ ಇತರೆ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡುತ್ತೇನೆ.

SRI T.B. JAYACHANDRA : It pertains to administration only. You are incompetent to place it before the house.

DR.H.C.MAHADEVAPPA : If the hon member so desire, whatever information I have got I will submit.

ನನ್ನ ಹತ್ತಿರ ಎಷ್ಟು ಮಾಹಿತಿ ಇದೆ ಅದನ್ನು ಖಂಡಿತ ಕೊಡುತ್ತೇನೆ. ಮಾನ್ಯ ಸದಸ್ಯರು ಬಹಳ ಹಿರಿಯವರಿದ್ದಾರೆ. ನಿಮಗೆ ಆ ರೀತಿ ಮಾಡಬೇಕೆಂಬ ಉದ್ದೇಶ ನನ್ನಲಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಇವತ್ತಿನ ದಿವಸ ನಡೆಯುವ ಶೂನ್ಯವೇಳೆಯಲ್ಲಿ ಉತ್ತರ ಕೊಡಿ.

ಡಾ. ಹೆಚ್. ಸಿ. ಮಹದೇವಪ್ಪ : ನಾಳೆ ನಡೆಯುವ ಶೂನ್ಯವೇಳೆಯಲ್ಲಿ ತೆಗೆದು ಕೋಳ್ಳೋಣ I request the hon. member to resume his seat.

(ಮಾನ್ಯ ರಾಮಸ್ವಾಮಿಯವರು ಬಾವಿಯಲ್ಲಿ ಧರಣಿ ಮಾಡುತ್ತಿದ್ದುದನ್ನು ನಿಲ್ಲಿಸಿ ತಮ್ಮ ಸ್ಥಾನಕ್ಕೆ ಮರಳಿದರು)

(4) 1999ರ ಕರ್ನಾಟಕ ಸ್ವಾಂಪು ತಿದ್ದುಪಡಿ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರು 1999ರ ಕರ್ನಾಟಕ ಸ್ವಾಂಪು ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1999ರ ಕರ್ನಾಟಕ ಸ್ವಾಂಪು ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಮಂಡಿಸಲು ಅನುಮತಿ ನೀಡಲಾಯಿತು

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) (ಕಂದಾಯ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ 1999ರ ಕರ್ನಾಟಕ ಸ್ವಾಂಪು ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : * ವಿಧೇಯಕವನ್ನು ಮಂಡಿಸಲಾಗಿದೆ. *

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಉಪಧ್ಯಕ್ಷರೆ, ಬಿಲ್ಲಿನ ಪ್ರತಿಯನ್ನು ನಮಗೆ ಒದಗಿಸಿಲ್ಲ. ತಾವು ಏನು ಮಾಡುತ್ತಿದ್ದೀರೆಂದು ನಮಗೆ ಗೊತ್ತಿಲ್ಲ. ಇವತ್ತು ಈ ಸದನದಲ್ಲಿ ಮಂಡನೆ ಮಾಡುತ್ತಿರುವ ಬಿಲ್ಲಿನ ಬಗ್ಗೆ ನಮಗೆ ಯಾವುದೇ ರೀತಿಯ ಪೂರ್ವ ಮಾಹಿತಿ ಇಲ್ಲ. ಇದರ ಬಗ್ಗೆ ಒಪ್ಪಿಗೆ ಕೊಡಬೇಕಾದರೆ ನಮಗೆ ಪೂರ್ಣ ಮಾಹಿತಿ ಗೊತ್ತಾಗಬೇಕಲ್ಲವೆ? ಇವತ್ತಿನ ಅಜಿಂಡದಲ್ಲಿದೆ, ಆದರೆ ಇದರ ಒಂದು

* ಸಹಬಂಧ IV